# ಮಕ್ಕಳ ಆಸ್ಥೆ

## ಬಾಲ್ಯ, ವ್ಯಕ್ತಿತ್ವ ವಿಕಾಸ ಮತ್ತು ಅಧ್ಯಾತ್ಮ

ಜಿ.ಎಸ್. ಜಯದೇವ್ *



### ವ್ಯಕ್ತಿತ್ವ ವಿಕಸನ

**ನಾವು** ಹುಟ್ಟಿದ ಮೊದಲ ದಿನದಿಂದ ಹಿಡಿದು ಸಾಯುವ ವರೆಗೂ ನಮ್ಮ ವ್ಯಕ್ತಿತ್ವ ವಿಕಾಸವಾಗುತ್ತಲೇ ಇರುತ್ತದೆ. ಆಧ್ಯಾತ್ಮ ಅನುಭವದ ಶಿಖರವೇ ನಮ್ಮ ವ್ಯಕ್ತಿವಿಕಾಸದ ಶಿಖರವೂ ಹೌದು. ಆದರೆ ಸಾಮಾನ್ಯವಾಗಿ ಬದುಕುವ ನಾವೆಲ್ಲ ಈ ಶಿಖರ ತಲುಪುವುದು ಅಪರೂಪ. ರಮಣಮಹರ್ಷಿಗಳು ತಮ್ಮ ಹದಿನಾರನೇ ವಯಸ್ಸಿನಲ್ಲೇ ಈ ಶಿಖರವನ್ನು ತಲುಪಿದರು. ನಾವು ಕೇವಲ ಊಹಿಸಬಹುದಾದ ಪರಿಪೂರ್ಣ ವ್ಯಕ್ತಿತ್ವವನ್ನು ಅವರು ಆ ಕ್ಷಣವೇ ಪಡೆದುಕೊಂಡುಬಿಟ್ಟರು. ರಾಮಕೃಷ್ಣ-ರಮಣ ಅಥವಾ ಬುದ್ಧ-ಕ್ರಿಸ್ತರಂತಹವರ ಉದಾಹರಣೆಗಳನ್ನು ಹೊರತು ಪಡಿಸಿದರೆ ಉಳಿದವರೆಲ್ಲ ತಮ್ಮ ಮನಸ್ಸಿನ ಆಳದಲ್ಲಿ ಹುದುಗಿರುವ ಓರೆಕೋರೆಗಳನ್ನು ನಿರಂತರವಾಗಿ ಗುರುತಿಸುತ್ತ ಅದನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡುತ್ತಲೇ ಇರುತ್ತಾರೆ. "ನಾನು ಬದುಕಿರುವ ಪರ್ಯಂತ ಕಲಿಯುತ್ತಲೇ ಇರುತ್ತೇನೆ" ಎಂಬ ಶ್ರೀರಾಮಕೃಷ್ಣರ ಮಾತು ಈ ಅಂಶಕ್ಕೆ ಪೂರಕವಾಗಿದೆ. ಜನಸಾಮಾನ್ಯರು ತಮ್ಮ ವ್ಯಕ್ತಿತ್ವ ವಿಕಾಸದ ಪ್ರಯತ್ನವನ್ನು ಎಂದೂ ನಿಲ್ಲಿಸದಿರಲಿ ಎಂಬ ಉದ್ದೇಶದಿಂದ ಬಹುಶಃ ಅವರು ಹೀಗೆ ಹೇಳಿದ್ದಾರೆಂದು ತೋರುತ್ತದೆ.

ಆದರೂ ಶೇಕಡ ೯೦ ಭಾಗ ಜನ ವ್ಯಕ್ತಿತ್ವ ವಿಕಾಸದ ಪ್ರಯತ್ನವನ್ನು ತಮ್ಮ ಜೀವನದ ಮೊದಲ ಹಂತಗಳಲ್ಲೆ ನಿಲ್ಲಿಸಿ ಬಿಟ್ಟಿರುತ್ತಾರೆ. ಇಂತಹ ವ್ಯಕ್ತಿಗಳು ಮಡುಗಟ್ಟಿದ ಆಳವಾದ ಬಾವಿಯಂತಾಗುತ್ತಾರೆ. ಇವರಿಗೆ ಸ್ವಾರ್ಥಮಯ ಬದುಕು ಮಾತ್ರ ಮುದ ನೀಡಬಲ್ಲದು. ಯಾರಿಗೂ ನೀರು ಕೊಡದ ಬಾವಿಯ ನೀರು ಕೊಳೆತು ದುರ್ನಾತ ಬರುವಂತೆ ಈ ವ್ಯಕ್ತಿಗಳ ಹತ್ತಿರ ಹೋದರೆ ಸಾಕು, ಇವರ ಅಂತರಂಗದ ಕೊಳಕು ಕಹಿಗಳು ನಮಗೆ ರಾಚುತ್ತವೆ. ಇಂತಹ ವ್ಯಕ್ತಿಗಳನ್ನು ನೋಡಿದಾಗ "ತೊಟ್ಟಿಲಿನಿಂದ ಸ್ಮಶಾನದವರೆಗೆ ಕಲಿಯುತ್ತಲೇ ಇರಬೇಕು" ಎಂಬ ಕುರಾನಿನ ಮಾತು ಎಷ್ಟು ಸಮಂಜಸ ಅನಿಸುತ್ತದೆಯಲ್ಲವೆ?

ಮಾನ್ಯ ಲೇಖಕರು ಸಮಾಜಸೇವಕರು. ಚಾಮರಾಜನಗರದಲ್ಲಿ ಅನಾಥ ಮಕ್ಕಳಿಗಾಗಿ **ದೀನಬಂಧು** ಎನ್ನುವ ಮಕ್ಕಳ ಮನೆಯನ್ನು ನಡೆಸುತ್ತಿದ್ದಾರೆ. ಅದಲ್ಲದೆ ಒಂದು ಶಾಲೆಯನ್ನೂ, ಅಸಹಾಯಕ ಹೆಣ್ಣುಮಕ್ಕಳಿಗಾಗಿ ಪುನರ್ವಸತಿ ನಿಲಯವನ್ನೂ ನಡೆಸುತ್ತಿದ್ದಾರೆ.

ಸ್ವಾಮಿ ವಿವೇಕಾನಂದರು ಪದೇ ಪದೇ ಒತ್ತಿ ಒತ್ತಿ ಹೇಳುತ್ತಿದ್ದ ಮಾತೆಂದರೆ "ಪ್ರತಿಯೊಬ್ಬ ಮಾನವನಲ್ಲೂ ದೈವತ್ವ ಅಡಗಿದೆ" ಎಂಬುದು. ಈ ಮಾತಿನ ಅರ್ಥ ನಾವೆಲ್ಲರೂ ಈಗಾಗಲೇ ಪರಿಪೂರ್ಣರಾಗಿದ್ದೇವೆ ಎಂದಲ್ಲ. ಪರಿಪೂರ್ಣತೆಯ ಸಾಧ್ಯತೆಯನ್ನು ಜಾತಿ ಜನಾಂಗಗಳ ತಾರತಮ್ಯವಿಲ್ಲದೆ ಎಲ್ಲರೂ ನಿಸ್ಸಂದೇಹವಾಗಿ ಪಡೆದಿದ್ದೇವೆ ಎಂಬುದು ಇದರ ಇಂಗಿತಾರ್ಥ. ಈ ಸಾಧ್ಯತೆಯ ಬಗ್ಗೆ ನಮಗೆ ಸಂದೇಹ ಬರದಿರಲಿ ಎಂದು ದೈವಿಕತೆಯ ಬಗ್ಗೆ ಸ್ವಾಮೀಜಿ ಮತ್ತೆ ಮತ್ತೆ ದೃಢಪಡಿಸುವ ಮಾತುಗಳನ್ನು ಆಡುತ್ತಾರೆ. ನಮ್ಮಲ್ಲಿ ಸುಪ್ತವಾಗಿ ಅಡಗಿರುವ ಈ ದೈವಿಕತೆ ನಾವು ವಿಚಾರ ಮಾಡುತ್ತಿರುವ ಪರಿಪೂರ್ಣ ವ್ಯಕ್ತಿತ್ವದ ಅಭಿವ್ಯಕ್ತಿಯ ಬೀಜರೂಪ.

### ಮನಸ್ಸಿನ ಎರಡು ಘಟಕಗಳು

ಏನೇ ಆಗಲಿ, ನಮ್ಮ ವ್ಯಕ್ತಿತ್ವ ವಿಕಾಸಗೊಳ್ಳಲು ಈ ಹೋರಾಟ ವಂತೂ ಅನಿವಾರ್ಯ. ಹೀಗೆ ಹೋರಾಟ ಮಾಡಬೇಕಾದ ಪ್ರಮೇಯವೇನು ಎಂದು ಸ್ವಲ್ಪ ಅರ್ಥಮಾಡಿಕೊಳ್ಳೋಣ. ನಮ್ಮ

**(ಚಿತ್ರಕೃಪೆ:** ನವಕರ್ನಾಟಕ ಪ್ರಕಾಶನ, 'ಮಕ್ಕಳ ಬೆಳವಣಿಗೆ ಮತ್ತು ನಾವು' ಗ್ರಂಥದಿಂದ, ಲೇಖಕರು: ಜಿ.ಎಸ್. ಜಯದೇವ್)

ಮನಸ್ಸು ಪ್ರಮುಖವಾಗಿ ಎರಡು ಘಟಕಗಳ ಜೋಡಣೆಯಿಂದ ಆಗಿವೆ ಎಂದು ಭಾವಿಸಬಹುದು. ಮೊದಲನೆಯದಾಗಿ ಅದು ತನ್ನದೇ ಆದ ವಿಶಿಷ್ಟ ಸ್ವಭಾವವನ್ನು **ಆನುವಂಶೀಯವಾಗಿ** (ಸಂಸ್ಕಾರ ರೂಪದಿಂದ ಎಂದು ಬೇಕಾದರೂ ಹೇಳಬಹುದು) ಪಡೆದು ಕೊಂಡಿದೆ. ಇದರ ಬಗ್ಗೆ ಹೇಳುವುದಾದರೆ, ನಮಗೆ ಇದರಲ್ಲಿ ಯಾವುದೇ ಆಯ್ಕೆ ಇಲ್ಲ. ಇದನ್ನು ಬ್ರಹ್ಮಲಿಪಿ ಎಂದು ಬೇಕಾದರೂ ಹೇಳಬಹುದು. ನಮ್ಮ ಮನಸ್ಸಿನ ಮತ್ತೊಂದು ಘಟಕ ಎಂದರೆ ನಮ್ಮ ಪರಿಸರ ಮತ್ತು ಪ್ರಚೋದನೆಗಳಿಗೆ ಒಳಪಟ್ಟು ಉತ್ಪತ್ತಿಯಾದ ಮನಸ್ಸು; ಎಂದರೆ ನಾವು ಇರುವ ಪರಿಸರ ರೂಪಿಸುವ ನಮ್ಮ ಮನಸ್ಸಿನ ಘಟಕ, ಜೀವನಾನುಭವ ದಲ್ಲಿ ನಾವು ಕಲಿಯುತ್ತ ಕಲಿಯುತ್ತ ರೂಪಿಸಿಕೊಳ್ಳುವ ನಮ್ಮ ಮನಸ್ಸು. ಇವೆರಡರ ಸಂಯೋಗದಿಂದ (ಆನುವಂಶೀಯತೆ ಮತ್ತು ಜೀವನಾನುಭವದಿಂದ ಬಂದುವುಗಳು) ಹುಟ್ಟುವ ವಿವೇಕವು ನಮ್ಮ ವ್ಯಕ್ತಿತ್ವ ವಿಕಾಸದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

ಮೊದಲನೆಯ ಘಟಕದಲ್ಲಿ ನಮಗೆ ಆಯ್ಕೆ ಸಾಧ್ಯವಾಗ ದಿದ್ದರೂ ಎರಡನೆಯ ಘಟಕದಿಂದ, ಪರಿಸರದ ಕಾರಣದಿಂದ ರೂಪುಗೊಳ್ಳುವ ಮನಸ್ಸಿನ ಭಾಗದ ಮೇಲೆ ಹತೋಟಿ ಸಾಧಿಸ ಬಹುದು. ಯಾವ ಪರಿಸರ ಎಂತಹ ಮನಸ್ಸನ್ನು ಸೃಷ್ಟಿಸಬಲ್ಲುದು ಎಂಬ ಬಗ್ಗೆ ಮಾಹಿತಿ ಈ ಕಾಲಮಾನದಲ್ಲಿ ಯಥೇಚ್ಛವಾಗಿ ಲಭ್ಯವಿದೆ. ಸಾಹಿತ್ಯ, ಕಲೆ, ಚರಿತ್ರೆ, ತತ್ವಶಾಸ್ತ್ರಗಳ ಹಾಳೆಗಳನ್ನು ತಿರುವಿ ಹಾಕಿದರೆ ಸಾಕು, ಪರಿಸರ ಹೇಗೆ ಮನುಷ್ಯ ಸ್ವಭಾವಗಳನ್ನು ರೂಪಿಸುತ್ತದೆ ಎಂದು ತಿಳಿಯುತ್ತದೆ. ಆಧುನಿಕ ಮನಶ್ಶಾಸ್ತ್ರವಂತೂ ಈ ತಥ್ಯದ ವ್ಯಾಪ್ತಿಯನ್ನು ನಿರೂಪಿಸಿದೆ.

**ಪರಿಸರ ಮತ್ತು ಮಗುವಿನ ಮನಸ್ಸು**

ಈ ಹಿನ್ನೆಲೆಯಲ್ಲಿ ನಮಗೆ ನಿರ್ವಿವಾದವಾಗಿ ತಿಳಿದಿರುವ ವಿಷಯಗಳೆಂದರೆ

- ಮಗು ಎಳೆಯದಾದಷ್ಟೂ ಅದರ ಮನಸ್ಸಿನ ಮೇಲೆ ಪರಿಸರ ಗಾಢವಾದ, ಅಳಿಸಲಾರದ ಪ್ರಭಾವ ಬೀರುತ್ತದೆ.
- ಮಗು ಪಡೆದ ಮೊದಲ ಹಂತದ ಅನುಭವಗಳು ಮುಂದಿನ ಅನುಭವಗಳನ್ನು ಅಂತರ್ಗತ ಮಾಡಿಕೊಳ್ಳುವಲ್ಲಿ ನಿರ್ಣಾ ಯಕ ಪಾತ್ರ ವಹಿಸುತ್ತವೆ. ಹೀಗೆ ಉಂಟಾದ ಅನುಭವಗಳ ಮೊತ್ತ ತದನಂತರದ ಅನುಭವಗಳನ್ನು ಅಂತರ್ಗತ ಮಾಡಿ ಕೊಳ್ಳುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಎಂದರೆ ಮೊದಲ ಹಂತದ ಮೂಲ ಅನುಭವಗಳು ತದನಂತರದಲ್ಲಿ ಉಂಟಾಗುವ ಅನುಭವ ಸರಣಿಗಳು ಪಕ್ವಗೊಳ್ಳುವ ಕ್ರಿಯೆಯ ಮೇಲೆ ಪ್ರಭಾವ ಬೀರುತ್ತವೆ.
- ಬಾಲ್ಯದಲ್ಲಿ ಅನುಭವಿಸಿದ ಸಿಹಿ ಅನುಭವಗಳು ಇತ್ಯಾತ್ಮಕ (Positive) ವ್ಯಕ್ತಿತ್ವವನ್ನು ಬೆಳೆಸಿದರೆ ಬಾಲ್ಯದ ಕಹಿಗಳು ನೇತ್ಯಾತ್ಮಕ (Negative) ವ್ಯಕ್ತಿತ್ವವನ್ನು ರೂಪಿಸುತ್ತವೆ.
- ಮಕ್ಕಳಿಗೆ ಗಾಢ ಅನುಭವ ನೀಡುವಲ್ಲಿ ಪರಿಸರದ ನಿರ್ಜೀವ ವಸ್ತುಗಳ ಪಾತ್ರ ಬಹಳ ಕಡಿಮೆ. ಅನುಸರಣೀಯ ಮಾದರಿಗಳೇ(Role Model) ಪ್ರಮುಖ ಪಾತ್ರವಹಿಸುತ್ತವೆ. ಮಕ್ಕಳು ಮುಖ್ಯವಾಗಿ ಪೋಷಕರಿಂದ, ಅಧ್ಯಾಪಕರ ನಡೆನುಡಿ ಗಳಿಂದ ಪ್ರಭಾವಿತರಾಗುತ್ತಾರೆ. ಕೇವಲ ಬಾಯಿಮಾತಿನ ಉಪದೇಶ ಯಾರನ್ನೂ ಬದಲಿಸಲಾರದು. ಈ ಬಗೆಯ ಬೋಧನೆಗಳು ಫಲಪ್ರದವಾಗಬೇಕಾದರೆ ಅದಕ್ಕೆ ಸ್ಪಂದಿಸುವ ಮನೋರಚನೆಯನ್ನು ಜೀವಂತ ಮಾದರಿಗಳಿಂದ ಈಗಾಗಲೇ ಮಗು/ಮನುಷ್ಯ ಪಡೆದಿರಬೇಕು.

**ಮಗು ಮೂಡಿಸಿಕೊಳ್ಳುವ ವ್ಯಕ್ತಿಚಿತ್ರ**

ಮೇಲಿನ ಅಂಶಗಳನ್ನು ಗಮನಿಸಿದರೆ ಮಗು ತಾನು ಪಡೆದ ಅನುಭವಗಳ ಆಧಾರದ ಮೇಲೆ ತನ್ನ ವ್ಯಕ್ತಿಚಿತ್ರವನ್ನು (Self Image) ಬೆಳೆಸಿಕೊಳ್ಳುತ್ತದೆ ಎನ್ನುವುದು ಗೊತ್ತಾಗುತ್ತದೆ. ಬಾಲಕ/ಬಾಲಕಿಯರು ತಮ್ಮ ಮೊದಲ ಹಂತದ ಬೆಳವಣಿಗೆಯಲ್ಲಿ ಪ್ರೀತಿ, ಆದರ, ಗೌರವಗಳನ್ನು ಪಡೆದರೆ ಇತ್ಯಾತ್ಮಕ ವ್ಯಕ್ತಿತ್ವ ರೂಪುಗೊಂಡು ಸಫಲತೆಗಳ ಸರಮಾಲೆಯನ್ನೇ ತಮ್ಮದಾಗಿಸಿ ಕೊಳ್ಳುತ್ತಾರೆ. ನಿರಂತರ ಸಫಲತೆಗಳು ಇವರಿಗೆ ಶ್ರೇಷ್ಠ ವ್ಯಕ್ತಿಚಿತ್ರವನ್ನು ತಂದು ಕೊಡುತ್ತದೆ ಎಂದರೆ ತಾವು ಇತ್ಯಾತ್ಮಕವಾದದ್ದನ್ನು ಸಾಧಿಸಬಲ್ಲ ವ್ಯಕ್ತಿಗಳು ಎಂಬ ದೃಢ ಭಾವ ಅವರಲ್ಲಿ ಮೂಡುತ್ತದೆ. ಬಾಲ್ಯ ಅಥವಾ ಶೈಶವಗಳಲ್ಲಿ ಕೇವಲ ಕಹಿಯನ್ನು ಅನುಭವಿಸಿದರೆ. ಎಂದರೆ ಪದೇ ಪದೇ ತಂದೆತಾಯಿಗಳ ಅನಾದರಕ್ಕೆ, ಕ್ರೌರ್ಯಕ್ಕೆ, ಅವಹೇಳನಕ್ಕೆ ಗುರಿಯಾದರೆ ಅಂತಹ ಮಕ್ಕಳು ಕೀಳು ವ್ಯಕ್ತಿಚಿತ್ರ ಬೆಳೆಸಿಕೊಳ್ಳುತ್ತಾರೆ. ಏಕೆಂದರೆ ಈ ಕಹಿ ಅನುಭವ ಗಳು ಮಗುವಿನ ಕಲಿಕೆಯ ಎಲ್ಲಾ ಅನುಭವಗಳಿಗೆ ಮಾರಕವಾಗಿ ವಿಫಲತೆಗಳನ್ನೇ ಅನುಭವಿಸುವಂತೆ ಮಾಡುತ್ತವೆ.

ಬಾಲ್ಯದ ಕಲಿಕಾವಸ್ಥೆಯಲ್ಲಿ ಸಿಹಿ-ಕಹಿ ಅನುಭವಗಳೆರಡೂ ಅನಿವಾರ್ಯವೆಂದು ನಮಗೆ ಗೊತ್ತಿದೆ. ಆದರೆ ದುರದೃಷ್ಟವಶಾತ್ ನಮ್ಮ ಪೋಷಕರಿಗೆ ಮಕ್ಕಳ ಬೆಳವಣಿಗೆಯ ಬಗ್ಗೆ ವೈಜ್ಞಾನಿಕ ತಿಳಿವಳಿಕೆ ಇಲ್ಲದಿರುವುದರಿಂದ ಬಾಲ್ಯದಲ್ಲಿ ಕಹಿ ಅನುಭವಗಳ ಪ್ರಮಾಣವೇ ಜಾಸ್ತಿಯಾಗಿರುತ್ತದೆ. ಈ ಬಗೆಯ ಜ್ಞಾನ ಇಲ್ಲದಿದ್ದರೂ ಗಾಢವಾಗಿ ಪ್ರೀತಿಸಬಲ್ಲ ಶಕ್ತಿಯಾದರೂ ಇದ್ದಿದ್ದರೆ ಈ ಕೊರತೆಯನ್ನು ನೀಗಿಸಬಹುದಾಗಿತ್ತು. ಆದರೆ ಇಂದಿನ ತಾಂತ್ರಿಕ ಬದುಕಿನ ಅವಸರದ ಓಟದಲ್ಲಿ ಹೀಗೆ ಪ್ರೀತಿಸಬಲ್ಲ ಮುಕ್ತ ಮನಸ್ಸು ಎಷ್ಟು ಜನರಿಗಿರಲು ಸಾಧ್ಯ? ಪ್ರಖ್ಯಾತ ಚಿಂತಕ ರಾದ ಜೆ. ಕೃಷ್ಣಮೂರ್ತಿ ಹೇಳುತ್ತಾರೆ: "ನಾವು ನಿಜವಾಗಿಯೂ ಮಕ್ಕಳನ್ನು ಪ್ರೀತಿಸಿದ್ದರೆ ಈ ಜಗತ್ತಿನಲ್ಲಿ ಯುದ್ಧವೆನ್ನುವುದೇ ಇರುತ್ತಿರಲಿಲ್ಲ", ಎಂದರೆ ಬಾಲ್ಯದಲ್ಲಿ ಗಾಢವಾದ ಪ್ರೀತಿಯನ್ನು ಅನುಭವಿಸಿದವರೆಲ್ಲ ಶ್ರೇಷ್ಠ ವ್ಯಕ್ತಿಚಿತ್ರ ಬೆಳೆಸಿಕೊಂಡು ಇತ್ಯಾತ್ಮಕ ವಾಗಿ ಬಾಳುತ್ತಿದ್ದರು. ನೇತ್ಯಾತ್ಮಕ ಮನಸ್ಸಿನ ವ್ಯಕ್ತಿಗಳೆ ಜಾಸ್ತಿ ಯಾದಾಗ ಯುದ್ಧ ಸಂಭವಿಸುತ್ತದೆ. ನೇತ್ಯಾತ್ಮಕ ವ್ಯಕ್ತಿಚಿತ್ರ ಬೆಳೆಸಿಕೊಂಡವರು ವಿಘ್ನ ಸಂತೋಷಿಗಳಾಗಿ (Destructive) ರೂಪುಗೊಳ್ಳುತ್ತಾರೆ.

## ಯಶಸ್ಸು – ಶ್ರೇಷ್ಠತೆ

ಇಂದಿನ ಕೈಗಾರಿಕಾ ಯುಗದಲ್ಲಿ ಆರ್ಥಿಕ ಯಶಸ್ಸನ್ನು ಮಾತ್ರ ಗುರಿಮಾಡಿಕೊಂಡು ನಾವು ನಮ್ಮ ಮಕ್ಕಳ ಮೇಲೆ ಅತಿಯಾದ ಒತ್ತಡ ಹೇರುತ್ತಿದ್ದೇವೆ. ಮಗು ತನ್ನ ಬಾಲ್ಯಸಹಜ ಸಂತೋಷಗಳನ್ನು ಅನುಭವಿಸಲು ನಾವು ಬಿಡುವುದೇ ಇಲ್ಲ. 'ಹೇಗಾದರಾಗಲಿ, ಎಂತಾದರೂ ಆಗಲಿ, ನಮ್ಮ ಮಗ/ಮಗಳು ಹಣ ಗಳಿಸುವಂತಾಗಲಿ' ಎಂದು ಬಯಸುತ್ತೇವೆ. ನಮ್ಮ ಸಮಾಜ ದಲ್ಲಿ ಕಾಣುವ ಜೀವಂತ ಮಾದರಿಗಳೆಲ್ಲವೂ ಹಣ–ಅಧಿಕಾರ ಗಳನ್ನು ಮಾತ್ರ ಗುರಿಯಾಗಿಟ್ಟುಕೊಂಡು ರೂಪುಗೊಂಡ ಜೀವನ ಮಾದರಿಗಳು. ಈ ಗುರಿಮುಟ್ಟುವ ಭರದಲ್ಲಿ ನಮ್ಮ ಮೌಲಿಕ ಬದುಕನ್ನೇ ನಾವು ಮಾರಿಕೊಂಡಿದ್ದೇವೆ. ಇಂದಿನ ದುರಂತವೆಂದರೆ ಬದುಕಿನ ಸಮೃದ್ಧಿಯನ್ನು ನಾವು ಆರ್ಥಿಕ ಮಾನದಂಡದಿಂದ ಮಾತ್ರ ಅಳೆಯಬಲ್ಲೆವು. ಹಣ ಕೇವಲ ಒಂದು ನಿರ್ಜೀವ ಸಾಧನ; ಅದನ್ನು ಬಳಸುವ 'ನಾನು' ಎಂಬುದು ಸಜೀವ ಸ್ಪಂದನ. ಸ್ಪಂದಿಸುವ ಶಕ್ತಿಯನ್ನೇ ಕಸಿದುಕೊಳ್ಳುವ ಈ ಹಣ ಗಳಿಕೆಯ ಗೀಳು ನಮ್ಮ ಜೀವನಕ್ಕೆ ಹೇಗೆ ತಾನೇ ಸಾರ್ಥಕತೆಯನ್ನು ತಂದುಕೊಟ್ಟೀತು?

ಯಶಸ್ಸನ್ನು ಮಾತ್ರ ಗುರಿಯಾಗಿಟ್ಟುಕೊಂಡು ಬೆಳೆಸಿಕೊಳ್ಳುವ ವ್ಯಕ್ತಿತ್ವ ಶ್ರೇಷ್ಠತೆಯ ಭಾವನೆಯನ್ನು ಎಂದೂ ತರಲಾರದು. ಯಶಸ್ಸು ಮತ್ತು ಶ್ರೇಷ್ಠತೆಗಳು ಮೂಲಭೂತವಾಗಿ ಬೇರೆ ಬೇರೆ ಎಂಬು ದನ್ನು ನಾವು ಅರಿಯಬೇಕು. ಯಶಸ್ಸನ್ನು ಗಳಿಸಲು ಮನುಷ್ಯ ಯಾವ ಮಾರ್ಗವನ್ನು ಬೇಕಾದರೂ ಅನುಸರಿಸಬಹುದು. ಯಶಸ್ಸನ್ನು ಗುರಿಯಾಗಿಟ್ಟುಕೊಂಡವರು ಸ್ವಲ್ಪ ಬುದ್ಧಿವಂತರಾದರೆ ಸಾಕು, ತಮ್ಮ ಒಡನಾಡಿಗಳನ್ನು ಸುಲಭವಾಗಿ ಮೆಟ್ಟಿ ನಿಂತು ಮೇಲೇರುತ್ತಾರೆ. ಇವರು ಗಳಿಸಿದ್ದು ಯಶಸ್ಸು, ಶ್ರೇಷ್ಠತೆ ಅಲ್ಲ ಎಂಬುದನ್ನು ನಾವು ಗುರುತಿಸಬೇಕು. **ಶ್ರೇಷ್ಠತೆ ಎಂಬುದು ಮೌಲ್ಯ ಮಾರ್ಗದಿಂದ ಮಾತ್ರ ಪಡೆಯಬಹುದಾದ ಮನಃಸ್ಥಿತಿ.** ಹೀಗೆ ಶ್ರೇಷ್ಠ ವ್ಯಕ್ತಿತ್ವ ಪಡೆದವನು ಹಣಗಳಿಕೆಯ ದೃಷ್ಟಿಯಿಂದ ಅಸಾಧಾರಣ ಯಶಸ್ಸು ಪಡೆಯದೆ ಇರಬಹುದು. ಆದರೆ ಈ ಶ್ರೇಷ್ಠತೆ ಅವನಿಗೆ ಬದುಕಿನ ಎಲ್ಲ ಸಮೃದ್ಧಿಗಳನ್ನು ಅನುಭವಿಸುವ, ಆಸ್ವಾದಿಸುವ ತೆರೆದ ಮನಸ್ಸನ್ನು ಕೊಡುತ್ತದೆ. ಇವನಿಗೆ ತಾನು ಪಡೆದ ಶ್ರೇಷ್ಠತೆಯ ಬಗ್ಗೆ ಯಾವ ಅನುಮಾನವೂ ಇರುವುದಿಲ್ಲ. ಏಕೆಂದರೆ ಅವನು ಅನುಸರಿಸಿದ ಮಾರ್ಗದುದ್ದಕ್ಕೂ ಅವನ ಮನಸ್ಸು ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿದೆ. ಹಾಗಾಗಿ ತಾನು ಪಡೆದ ಶ್ರೇಷ್ಠತೆಯ ಬಗ್ಗೆ ಅವನಿಗೆ ದೃಢ ವಿಶ್ವಾಸ ಮೂಡುತ್ತದೆ. ಆದರೆ ಕೇವಲ ಯಶಸ್ಸನ್ನು ಮಾತ್ರ ಪಡೆದ ವ್ಯಕ್ತಿ ತನ್ನ ಯಶಸ್ಸಿನ ಹಿಂದೆ ಇರಬಹುದಾದ ಯಾವ ಶ್ರೇಷ್ಠತೆಯನ್ನೂ ಗುರುತಿಸಲಾರ. ಏಕೆಂದರೆ ಅವನು ಅನುಸರಿಸಿದ ಮಾರ್ಗದಲ್ಲಿ ಋಜುತ್ವವಿಲ್ಲ; ಅವನು ನಡೆದ ಹಾದಿ ಒಂದು ಸ್ಥಿರವಾದ ಮೌಲ್ಯವನ್ನು ಆಧರಿಸಿಲ್ಲ. ಸಂದರ್ಭಕ್ಕೆ ತಕ್ಕಂತೆ ಸುಲಭವಾಗಿ ಬದಲಾಗುವ ತನ್ನ ವ್ಯಕ್ತಿತ್ವದ ಖಚಿತ ರೂಪುರೇಖೆಗಳ ಬಗ್ಗೆ ಯಾವ ದೃಢ ವಿಶ್ವಾಸವನ್ನೂ ಇಡಲಾರ. ನನ್ನಲ್ಲೇ ನನಗೆ ಗಾಢ ವಾದ ನಂಬಿಕೆ ಬರಬೇಕಾದರೆ ಶ್ರೇಷ್ಠ ವ್ಯಕ್ತಿತ್ವವನ್ನು ನಾನು ಪಡೆದಿರಬೇಕು. ಇದನ್ನೇ ಸ್ವಾಮಿ ವಿವೇಕಾನಂದರು ಹೇಳುತ್ತಿ ದ್ದುದು, "ದೇವರನ್ನು ನಂಬದಿದ್ದರೆ ನಷ್ಟವಿಲ್ಲ; ನಿನ್ನಲ್ಲಿ ನಿನಗೆ ನಂಬಿಕೆ ಇರಲಿ."

## ಕ್ರೌರ್ಯ–ಹಿಂಸೆಗಳ ಮೂಲ

ಕ್ರೌರ್ಯ ಹಿಂಸೆ ಅನಾದರಗಳು ಮನದಾಳದಲ್ಲಿ ಹುದುಗಿದ್ದು ಸಂದರ್ಭಕ್ಕೆ ತಕ್ಕಂತೆ ಪದೇ ಪದೇ ವ್ಯಕ್ತವಾಗುತ್ತಲೇ ಇರುತ್ತವೆ. ಹಿಟ್ಲರ್–ಸ್ಟಾಲಿನ್ ರಂತಹ ಕ್ರೂರ ವ್ಯಕ್ತಿಗಳ ಬಗ್ಗೆ ಈ ವಿಶ್ಲೇಷಣೆ ಸಮಂಜಸವಾಗಿದೆ. ಇವರು ಬಾಲ್ಯದಲ್ಲಿ ತಾವು ಅನುಭವಿಸಿದ ಕ್ರೌರ್ಯ, ಹಿಂಸೆಗಳನ್ನು ತಮ್ಮದೇ ರೀತಿಯಲ್ಲಿ ಜಗತ್ತಿಗೆ ಹಿಂತಿರುಗಿಸಿದರು. ಈ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಹಿಂಸೆ ಕ್ರೌರ್ಯಗಳನ್ನು ಅನುಭವಿಸಿದವರೆಲ್ಲ ಹಿಟ್ಲರ್–ಸ್ಟಾಲಿನ್‌ಗಳಾಗು ತ್ತಾರೆಯೆ ಎಂಬ ಪ್ರಶ್ನೆ ಏಳುತ್ತದೆ. ಎಲ್ಲರೂ ಹೀಗಾಗುವುದಿಲ್ಲ. ಆದರೆ ತಾವು ಅನುಭವಿಸಿದ ಕ್ರೌರ್ಯ ಹಿಂಸೆಗಳನ್ನು ತಾವು ಅನುಭವಿಸಲೇ ಇಲ್ಲವೇನೋ ಎಂಬಂತೆ ಮರೆಮಾಚುತ್ತ, ನಿರಂತರ ವಾಗಿ ಅದರ ಅನಿವಾರ್ಯತೆಯನ್ನು ಉದಾತ್ತ ಆಯಾಮದಲ್ಲಿ ಯಾರು ವೈಭವೀಕರಿಸಿಕೊಳ್ಳುತ್ತಾರೋ, ಅಂತಹವರ ನಡುವಿನಿಂದ ಹಿಟ್ಲರ್–ಸ್ಟಾಲಿನ್ ನಂಥವರು ಹುಟ್ಟುತ್ತಾರೆ. ಇದನ್ನು ನಮ್ಮದೇ ಉದಾಹರಣೆಯ ಮುಖಾಂತರ ಹೇಳುವುದಾದರೆ – ನಮ್ಮ ಹಿರಿಯರು ನಮ್ಮನ್ನು ಬಾಲ್ಯದಲ್ಲಿ ಥಳಿಸಿದ್ದರಿಂದ ನಮಗೆ ಒಳ್ಳೆಯದೇ ಆಯಿತು ಎಂದು ನಾವು ಭಾವಿಸಿದರೆ, ನಾವು ನಮ್ಮ ಮಕ್ಕಳ ಒಳಿತಿಗಾಗಿ ಅವರನ್ನು ಥಳಿಸುತ್ತೇವೆ. ಒಂದು ವೇಳೆ ನಮ್ಮ ಹಿರಿಯರು ನಮ್ಮನ್ನು ಥಳಿಸಿದ್ದು (ಅವರು ನಮ್ಮ ತಂದೆ–ತಾಯಿಯರೇ ಆದರೂ) ಒಂದು ಕ್ರೌರ್ಯ, ಈ ಕ್ರಮ ಸರಿಯಲ್ಲ ಎಂದು ನಾವು ತೆರೆದ ಮನಸ್ಸಿನಿಂದ ಒಪ್ಪಿಕೊಂಡರೆ ನಾವು ನಮ್ಮ ಮಕ್ಕಳನ್ನು ಯಾವ ಕಾರಣಕ್ಕೂ ಥಳಿಸಲಾರೆವು.

ಈ ಸಂದರ್ಭದಲ್ಲಿ ಒಂದು ಸಮೀಕ್ಷೆಯ ವಿವರಗಳನ್ನು ಚರ್ಚಿಸುವುದು ಉಚಿತವಾಗಿದೆ. ಈ ಸಮೀಕ್ಷೆಯ ಉದ್ದೇಶ ಶಾಲೆಯಲ್ಲಿ ಕಡ್ಡಿಯಿಂದ ಮಕ್ಕಳನ್ನು ಹೊಡೆಯುವ–ಹೊಡೆಯದ ಅಧ್ಯಾಪಕರನ್ನು ಕುರಿತದ್ದಾಗಿತ್ತು. ಹೀಗೆ ಹೊಡೆಯುವ ಎಲ್ಲಾ ಅಧ್ಯಾಪಕರನ್ನೂ ಅವರ ಶಾಲಾ ದಿನಗಳ ಬಗ್ಗೆ ಪ್ರಶ್ನಿಸಲಾಯಿತು. ತಾವು ಶಾಲಾ ಮಕ್ಕಳಾಗಿದ್ದಾಗ ಅಧ್ಯಾಪಕರು ತಮಗೆ ಚೆನ್ನಾಗಿ ಬಾರಿಸಿದ್ದರಿಂದ ತಾವು ವಿದ್ಯೆ ಬುದ್ಧಿ ಕಲಿಯಲು ಸಾಧ್ಯವಾಯಿ ತೆಂದೂ, ಆದ್ದರಿಂದ ತಾವು ಕಲಿಸುತ್ತಿರುವ ಶಾಲಾ ಮಕ್ಕಳು ವಿದ್ಯೆ ಬುದ್ಧಿ ಕಲಿಯಬೇಕಾದರೆ ತಾವು ಅನುಭವಿಸಿದ ಹಾಗೆ ಶಿಕ್ಷೆಯನ್ನು ಇವರೂ ಅನುಭವಿಸಬೇಕೆಂಬುದು ಇವರ ವಾದ! ಆದರೆ ಹೊಡೆಯದ ಅಧ್ಯಾಪಕರ ವಿವರಣೆ ಬೇರೆಯೇ ಆಗಿತ್ತು. ಅವರೂ ಕೂಡ ತಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳುತ್ತ ಹೀಗೆ ಹೇಳಿದರು – "ನಮ್ಮ ಅಧ್ಯಾಪಕರು ನಮಗೆ ಹೊಡೆಯದೆ–

ಬಡಿಯದೆ ಪ್ರೀತಿಯಿಂದ ಪಾಠ ಹೇಳಿದರು. ನಾವು ಕಲಿತೆವು. ಆದ್ದರಿಂದ ನಮಗೆ ಹೊಡೆಯುವುವರಲ್ಲಿ ನಂಬಿಕೆ ಇಲ್ಲ!" ಈಗ ಶಾಲೆಯಲ್ಲಿ ಹೊಡೆಯುತ್ತಿರುವ ಅಧ್ಯಾಪಕರೆಲ್ಲ ತಮ್ಮ ಶಾಲಾ ದಿನಗಳಲ್ಲಿ ಪೆಟ್ಟು ತಿಂದವರೆ, ಹೊಡೆಯದ ಅಧ್ಯಾಪಕರೆಲ್ಲಾ ತಮ್ಮ ಶಾಲಾ ದಿನಗಳಲ್ಲಿ ಪೆಟ್ಟು ತಿನ್ನದೆ ಪಾರಾದವರೇ!

**ಶ್ರೇಷ್ಠ ವ್ಯಕ್ತಿತ್ವ ರೂಪುಗೊಳ್ಳುವ ವಿಧಾನ**

ಇಂದಿನ ಭಯೋತ್ಪಾದನೆಯ ಮೂಲವನ್ನು ನಾವು ಈ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು. ವ್ಯಕ್ತಿತ್ವದ ಅನೇಕ ನ್ಯೂನತೆಗಳಿಗೆ ಬಾಲ್ಯದಲ್ಲಿ ಅನುಭವಿಸಿದ ಕ್ರೌರ್ಯ–ಅನಾದರಗಳೇ ಕಾರಣ. ಮುಖ್ಯವಾಗಿ ಮಕ್ಕಳಿಗೆ ಗಾಢವಾದ ಪ್ರೀತಿ–ಸ್ವೀಕಾರಗಳು (acceptance) ಸಿಗಬೇಕು. ತಾನು 'ತಿರಸ್ಕೃತ' ಎಂಬ ಭಾವನೆ ಮನದಾಳದಲ್ಲಿ ಹುದುಗಿಕೊಂಡು ನೇತ್ಯಾತ್ಮಕ ವ್ಯಕ್ತಿತ್ವಕ್ಕೆ ಕಾರಣ ವಾಗುತ್ತದೆ. ಶ್ರೇಷ್ಠ ವ್ಯಕ್ತಿತ್ವ ರೂಪುಗೊಳ್ಳುವ ಕ್ಲಿಷ್ಟ ವಿಧ್ಯಮಾನವನ್ನು ನಾವು ಹೀಗೆ ಸರಳೀಕರಿಸಬಹುದು. ಈ ಕೆಳಗಿನ ಸಂಗತಿಗಳು ಒಂದು ಶ್ರೇಷ್ಠ ವ್ಯಕ್ತಿತ್ವವನ್ನು ರೂಪಿಸಬಲ್ಲುವು:

**ಕ್ರೌರ್ಯ ಹಿಂಸೆಗಳಿಲ್ಲದ ಸುಮಧುರ ಬಾಲ್ಯ**

⬇

**ಸುಪ್ತ ಸಾಮರ್ಥ್ಯಗಳ ವಿಕಾಸ**

⬇

**ಸಫಲತೆಗಳ ಸರಮಾಲೆ**

⬇

**ಶ್ರೇಷ್ಠ ವ್ಯಕ್ತಿಚಿತ್ರ ಮತ್ತು ಇತ್ಯಾತ್ಮಕ ಮನೋಭಾವ**

**ನೇತ್ಯಾತ್ಮಕ ಭಾವನೆಗಳ ಭೀಕರ ಪರಿಣಾಮ**

ಶ್ರೇಷ್ಠ ವ್ಯಕ್ತಿತ್ವವಿಲ್ಲದೆ ಯಶಸ್ಸನ್ನು ಪಡೆದರೂ ಅದು ಮನುಷ್ಯ ನಿಗೆ ಜೀವನಪ್ರೀತಿಯನ್ನೂ, ಇತ್ಯಾತ್ಮಕ ಸಂತೋಷವನ್ನೂ ಕೊಡ ಲಾರದು. ಬಾಲ್ಯದ ಅನುಭವಗಳಲ್ಲಿ ಕಹಿ ಪ್ರಸಂಗಗಳೇ ಪ್ರಧಾನ ವಾಗಿದ್ದರೆ ಅಂತಹವರು ಈ ಕಹಿಗಳನ್ನು ಮರೆತು ಇತ್ಯಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳಬೇಕಾದರೆ ಬಹಳ ಕಷ್ಟ ಪಡಬೇಕಾಗು ತ್ತದೆ. ನೇತ್ಯಾತ್ಮಕ ಭಾವನೆಗಳಿರುವ ಮನುಷ್ಯನ ಇಡೀ ಜೀವನ ಒಂದು ಬಗೆಯ ರಣರಂಗವಾಗುತ್ತದೆ. ಅವನು ಜೀವನದುದ್ದಕ್ಕೂ ನೇತ್ಯಾತ್ಮಕ ಭಾವನೆಗಳೊಡನೆ ಹೋರಾಡುತ್ತಾ ಇರುತ್ತಾನೆ.

ಇವನ ಅಂತರಂಗದ ಹೋರಾಟ–ಪ್ರತಿಭಟನೆಗಳು ಹೊರ ಜಗತ್ತಿನ ವಿವಾದಾತ್ಮಕ ಪ್ರಸಂಗಗಳಲ್ಲಿ ಅನುರಣಿತಗೊಳ್ಳುವು ದುಂಟು. ಹೊರಜಗತ್ತಿನಲ್ಲಿ ಹೋರಾಟದ ಪ್ರಸಂಗಗಳು ಕಾಣಿಸಿ ಕೊಂಡಾಗಲೆಲ್ಲ ಇವನ ಅಂತರಂಗದ ಸುಪ್ತ ಹೋರಾಟ ಬಹಿರಂಗದ ಹೋರಾಟಕ್ಕೆ ಸ್ಫೂರ್ತಿ, ಚಾಲನೆಯನ್ನು ನೀಡಬಲ್ಲದು. ಇಂತಹ ವ್ಯಕ್ತಿಗಳು ಒಳಮನಸ್ಸಿನ ಒತ್ತಡದಿಂದಾಗಿ ಕಾರಣವೇ ಇಲ್ಲದೆ ಹೋರಾಟಕ್ಕಿಳಿಯಬಹುದು. ಬಾಲ್ಯದಲ್ಲಿ ಅನುಭವಿಸಿದ ಕಹಿ, ಮಕ್ಕಳ ಮನಸ್ಸಿನ ಮೇಲೆ ಶಾಶ್ವತವಾಗಿ ನೇತ್ಯಾತ್ಮಕ ಪ್ರಭಾವ ಬೀರುತ್ತದೆ. ಬಾಲಾಪರಾಧಗಳು ಹೆಚ್ಚುತ್ತಿರುವ ಇಂದಿನ ಕಾಲದಲ್ಲಿ ನಾವು ಈ ಅಂಶಗಳಿಗೆ ಗಮನ ಕೊಡಬೇಕು.

**ಆಧ್ಯಾತ್ಮಿಕ ಪರಿಹಾರ**

ಒಂದು ವೇಳೆ ವ್ಯಕ್ತಿಯೊಬ್ಬ ತನ್ನ ಬಾಲ್ಯದಲ್ಲಿ ಹೆಚ್ಚಾದ ಕಹಿ ಘಟನೆಗಳನ್ನೇ ಅನುಭವಿಸಿದ್ದರೆ ಅವನು ಬೆಳೆದ ನಂತರ ಇವೇ ಕಹಿಗಳನ್ನು ಸಮಾಜಕ್ಕೆ ಹಿಂತಿರುಗಿಸಬೇಕೆ? ತನ್ನ ಮನೋವಲಯ ದಲ್ಲಿ ಇವುಗಳ ವಿರುದ್ಧ ಹೋರಾಟ ನಡೆಸುತ್ತಲೇ ಇರುವುದು ಅನಿವಾರ್ಯವೆ? ಎಂಬ ಪ್ರಶ್ನೆ ಏಳುತ್ತದೆ. ಕೇವಲ ಮನಶ್ಶಾಸ್ತ್ರದ ಆಧಾರದ ಮೇಲೆ ನಾವು ವಿಶ್ಲೇಷಿಸಿದರೆ, ಇಂತಹ ಕಹಿ ಉಂಡ ಬಾಲ್ಯ ನೇತ್ಯಾತ್ಮಕ ಪರಿಣಾಮಗಳನ್ನುಂಟುಮಾಡುವುದು ಸಹಜ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಅಧ್ಯಾತ್ಮ ದೃಷ್ಟಿಯಿಂದ ನೋಡಿದರೆ ಇದಕ್ಕೆ ಪರಿಹಾರವಿದೆ. ಆಧ್ಯಾತ್ಮಿಕ ವ್ಯಕ್ತಿಗಳ ಜೀವನದಲ್ಲಿ ಈ ಬಗೆಯ ಉದಾಹರಣೆಗಳನ್ನು ಕಾಣಬಹುದು. ಅಷ್ಟೇ ಏಕೆ ಈ ಕಹಿ ಅನುಭವಗಳು ಮತ್ತೊಂದು ಆಧ್ಯಾತ್ಮಿಕ ಹಂತಕ್ಕೆ ಏರಲು ಬೇಕಾದ ಸೋಪಾನವಾಗಿ ಪರಿಣಮಿಸಬಹುದು!

ವಿವೇಕಾನಂದರು ಹೇಳುವಂತೆ ಪ್ರತಿಯೊಬ್ಬನಲ್ಲೂ ಅದಮ್ಯ ದಿವ್ಯತೆ ಅಡಗಿದೆ. ಈ ಭಾವನೆ ಬೀಜ ರೂಪದಲ್ಲಿ ನಮ್ಮೊಳಗೆ ಅಡಗಿದ್ದು ಅದಕ್ಕೆ ಪೂರಕವಾದ ಜೀವನ ದೃಷ್ಟಿಯ ಆರೈಕೆಯಿಂದ ಬಲಿತು ಬೆಳೆದರೆ ಹಿಂದಿನ ಎಲ್ಲ ಕಹಿಗಳನ್ನೂ ಮೀರಿನಿಂತು ಶ್ರೇಷ್ಠ ವ್ಯಕ್ತಿಚಿತ್ರ ಅಥವಾ ವ್ಯಕ್ತಿತ್ವ ಬೆಳೆಯುತ್ತದೆ. ಅಧ್ಯಾತ್ಮ ಸಾಧನೆಯು ವರ್ತಮಾನಕ್ಕೆ ಆದ್ಯತೆ ನೀಡುತ್ತ ಕಹಿಗಳಿಗೆ ಕಾರಣ ವಾದವರೆಲ್ಲರನ್ನೂ ಕ್ಷಮಿಸುವ ಔದಾರ್ಯತೆಯನ್ನು ತಂದು ಕೊಡುತ್ತದೆ. ವ್ಯಕ್ತಿಯೊಬ್ಬ ತನ್ನೊಳಗಿನ ಶ್ರೇಷ್ಠತೆಯನ್ನು ಹೆಚ್ಚುಹೆಚ್ಚಾಗಿ ಮನಗಂಡಷ್ಟೂ ತನ್ನ ಭೂತಕಾಲದ ಸಂಕೋಲೆಗಳೆಲ್ಲದರಿಂದಲೂ ಮುಕ್ತನಾಗುತ್ತಾನೆ. ಹಿಂದೆ ಆಗಿಹೋದ ಕ್ಲೇಶ ಕಷ್ಟ ಕಾರ್ಪಣ್ಯ ಗಳಿಂದ ಮಾನಸಿಕವಾಗಿ ಪಾರಾಗದೆ ಶ್ರೇಷ್ಠ ವ್ಯಕ್ತಿಚಿತ್ರ ಪಡೆಯಲು ಸಾಧ್ಯವಿಲ್ಲ.

**ಆಧ್ಯಾತ್ಮಿಕ ಸಾಧನೆ ಎಂದರೆ ಹಿಂದಿನಿಂದ ಹೊತ್ತುತಂದ ಭಾರವಾದ ಭಾವನೆಗಳಿಂದ ಬಿಡುಗಡೆ.** ಹೀಗೆ ಬಿಡುಗಡೆ ಗೊಂಡಂತೆಲ್ಲ ಆಂತರ್ಯದ ಶ್ರೇಷ್ಠತೆಯನ್ನೂ, ಅದು ತಂದು ಕೊಡುವ ಸ್ವಾತಂತ್ರ್ಯವನ್ನೂ, ಆಧ್ಯಾತ್ಮಿಕ ಸಿದ್ಧಿಯಿಂದ ಅನುಭವಿಸು ತ್ತೇವೆ. ಮನಶ್ಶಾಸ್ತ್ರ ತಂದುಕೊಡಲಾರದ ಪರಿವರ್ತನೆಯನ್ನು ಅಧ್ಯಾತ್ಮ ತಂದು ಕೊಡುವುದನ್ನು ನಾವು ಇಲ್ಲಿ ಕಾಣಬಹುದು. ಮನಶ್ಶಾಸ್ತ್ರಕ್ಕಿಂತ ಅಧ್ಯಾತ್ಮವು ಮಾನವವನ್ನು ಹೆಚ್ಚು ನೈಜವಾಗಿ ವಾಸ್ತವವಾಗಿ ನೋಡುತ್ತದೆ. ಆದ್ದರಿಂದ ಅದು ತಂದುಕೊಡುವ ಫಲವು ವಾಸ್ತವಿಕತೆಗೆ ಹತ್ತಿರವಾಗಿದ್ದು, ನೈಜತೆಗೆ ನಿಕಟವಾಗಿರು ತ್ತದೆ. ಹೀಗಾಗಿ ಮನಶ್ಶಾಸ್ತ್ರಕ್ಕಿಂತಲೂ ನಮ್ಮ ಮಕ್ಕಳ ಬೆಳ ವಣಿಗೆಯ ದೃಷ್ಟಿಯಲ್ಲಿ ಆಧ್ಯಾತ್ಮಿಕ ದೃಷ್ಟಿಕೋನವು ಹೆಚ್ಚು ಉಪಯೋಗಕರವಾಗಬಲ್ಲುದು ಎನ್ನುವುದು ಇದರಿಂದ ಸಿದ್ಧ ವಾಗುತ್ತದೆ.